ಆಪ್ಷನ್ ಟ್ರೇಡಿಂಗ್‌ನ ಹೆಚ್ಚುವರಿ ಅಪಾಯ ಪ್ರಕಟಣೆಯ ದಾಖಲೆಗಳು

ಆಪ್ಷನ್ ಹೋಲ್ಡರ್‌ಗಳ ಅಪಾಯ:

1. ಆಪ್ಷನ್ ಹೋಲ್ಡರ್‌ಗಳು ಆಪ್ಷನ್‌ಗೆ ಪಾವತಿಸಿದ ಸಂಪೂರ್ಣ ಮೊತ್ತವನ್ನು ಅಲ್ಪಾವಧಿಯಲ್ಲಿ ಕಳೆದುಕೊಳ್ಳುವ ಅಪಾಯವನ್ನು ಹೊಂದಿರುತ್ತಾರೆ. ಈ ಅಪಾಯವು ಆಪ್ಷನ್‌ನ ಸ್ವರೂಪವನ್ನು ವಾಯಿದೆ ಮುಗಿದಾಗ ಮೌಲ್ಯ ಕಳೆದುಕೊಳ್ಳುವ ವ್ಯರ್ಥ ಆಸ್ತಿಯೆಂಬಂತೆ ಪ್ರತಿಬಿಂಬಿಸುತ್ತದೆ. ಆಪ್ಷನ್‌ನ ಹಕ್ಕುದಾರರಿಗೆ ತಮ್ಮ ಆಯ್ಕೆಯನ್ನು ಸೆಕೆಂಡರಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲೂ ಆಗುವುದಿಲ್ಲ ಅಥವಾ ಅದರ ವಾಯಿದೆ ಮುಗಿಯುವ ಮೊದಲು ಅದನ್ನು ಬಳಸಿಕೊಳ್ಳಲೂ ಆಗುವುದಿಲ್ಲ, ಅದರಿಂದಾಗಿ ಅವರು ಆಪ್ಷನ್‌ನಲ್ಲಿನ ತಮ್ಮ ಸಂಪೂರ್ಣ ಹೂಡಿಕೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಆಪ್ಷನ್‌ನ ವಾಯಿದೆ ಮುಗಿಯುವ ಮೊದಲು ಆಪ್ಷನ್‌ನ ಖರ್ಚನ್ನು ಭರಿಸುವಷ್ಟು ಅದರ ಬೆಲೆಯು ನಿರೀಕ್ಷಿತ ದಿಕ್ಕಿನಲ್ಲಿ ಬದಲಾಗದಿದ್ದರೆ, ಹೂಡಿಕೆದಾರರು ಆಪ್ಷನ್‌ನಲ್ಲಿನ ಅವರ ಹೂಡಿಕೆಯ ಒಂದು ಗಮನಾರ್ಹ ಭಾಗವನ್ನು ಅಥವಾ ಎಲ್ಲವನ್ನೂ ಕಳೆದುಕೊಳ್ಳಬಹುದು.

2. ವಿನಿಮಯ ಕೇಂದ್ರವು ಬಳಕೆಯ ನಿರ್ಬಂಧಗಳನ್ನು ಹೇರಬಹುದು ಹಾಗೂ ನಿರ್ದಿಷ್ಟ ಸಂದರ್ಭಗಳಲ್ಲಿ ಕೆಲವೊಂದು ಬಾರಿ ಆಪ್ಷನ್‌ಗಳ ಬಳಕೆಯನ್ನು ನಿರ್ಬಂಧಿಸುವ ಸಂಪೂರ್ಣ ಅಧಿಕಾರ ಹೊಂದಿರುತ್ತದೆ.

ಆಪ್ಷನ್ ರೈಟರ್‌ಗಳ ಅಪಾಯಗಳು:

1. ಆಪ್ಷನ್‌ನ ಬೆಲೆಯ ವ್ಯತ್ಯಾಸವು ನಿರೀಕ್ಷಿತ ದಿಕ್ಕಿನಲ್ಲಿಲ್ಲದಿದ್ದರೆ, ಆಪ್ಷನ್ ರೈಟರ್ ಗಮನಾರ್ಹ ಮೊತ್ತವನ್ನು ಕಳೆದುಕೊಳ್ಳುವ ಅಪಾಯವನ್ನು ಹೊಂದಿರುತ್ತಾರೆ.

2. ಅದೇ ಆಪ್ಷನ್‌ನ ಬಡ್ಡಿಯಲ್ಲಿ ಇತರೆ ಆಪ್ಷನ್‌ಗಳನ್ನು ಖರೀದಿಸಿ, ಆ ಮೂಲಕ ವಿಶಾಲ ಸ್ಥಾನವನ್ನು ಹೊಂದುವ ಮೂಲಕ ಅಥವಾ ಆಪ್ಷನ್ ಮಾರುಕಟ್ಟೆಗಳಲ್ಲಿ ಅಥವಾ ಇತರೆ ಮಾರುಕಟ್ಟೆಗಳಲ್ಲಿ ಇತರೆ ಪ್ರಕಾರದ ರಕ್ಷಣಾತ್ಮಕ ಸ್ಥಾನಗಳನ್ನು ಪಡೆಯುವ ಮೂಲಕ ಆಪ್ಷನ್ ರೈಟರ್‌ನ ಅಪಾಯವನ್ನು ಕಡಿಮೆ ಮಾಡಬಹುದು. ರೈಟರ್ ವಿಶಾಲವಾದ ಅಥವಾ ಇತರೆ ರಕ್ಷಣಾತ್ಮಕ ಸ್ಥಾನವನ್ನು ಪಡೆದರೂ ಸಹ, ಅಪಾಯಗಳು ಇನ್ನೂ ಗಮನಾರ್ಹವಾಗಿರುತ್ತವೆ. ವಿಶಾಲವಾದ ಸ್ಥಾನವು ಸರಳವಾದ 'ದೊಡ್ಡ' ಅಥವಾ 'ಚಿಕ್ಕ' ಸ್ಥಾನಕ್ಕಿಂತ ಕಡಿಮೆ ಅಪಾಯಕಾರಿಯಾಗಿರಬೇಕಾದ ಅಗತ್ಯವಿಲ್ಲ.

3. ಅನೇಕ ಆಪ್ಷನ್‌ಗಳನ್ನು ಒಟ್ಟಾಗಿ ಖರೀದಿ ಮತ್ತು ಮಾರಾಟ ಮಾಡುವುದನ್ನು, ಅಥವಾ ಅವುಗಳ ಬಡ್ಡಿಗಳನ್ನು ಖರೀದಿ ಅಥವಾ ಮಾರಾಟ ಮಾಡುವುದರ ಜೊತೆಗೆ ಆಪ್ಷನ್‌ಗಳನ್ನು ಖರೀದಿ ಅಥವಾ ಮಾರಾಟ ಮಾಡುವುದನ್ನು ಒಳಗೊಳ್ಳುವ ವಹಿವಾಟುಗಳು ಹೂಡಿಕೆದಾರರಿಗೆ ಹೆಚ್ಚುವರಿ ಅಪಾಯಗಳನ್ನು ಹೊಂದಿರುತ್ತವೆ. ಆಪ್ಷನ್ ಸ್ಪ್ರೆಡ್‌ಗಳಂತಹ ಸಂಯೋಜಿತ ವಹಿವಾಟುಗಳು ಒಂದು ಆಪ್ಷನ್‌ಅನ್ನು ಖರೀದಿ ಅಥವಾ ಮಾರಾಟ ಮಾಡುವುದಕ್ಕಿಂತ ಹೆಚ್ಚು ಜಟಿಲವಾಗಿರುತ್ತವೆ. ಯಾವುದೇ ರೀತಿಯ ಹೂಡಿಕೆಯಲ್ಲಿ, ಜಟಿಲತೆಯ ಬಗ್ಗೆ ಸರಿಯಾಗಿ ತಿಳಿದಿಲ್ಲದಿರುವುದೂ ಸಹ ಒಂದು ಅಪಾಯಕಾರಿ ಅಂಶವಾಗಿರುತ್ತದೆ ಎಂಬುದನ್ನು ಗಮನಿಸಬೇಕು. ಸಂಯೋಜಿತ ವಹಿವಾಟುಗಳನ್ನು ಪರಿಗಣಿಸಬಾರದೆಂದು ಸೂಚಿಸಬಾರದು ಆದರೂ, ಐಪ್ಷನ್‌ಗಳಲ್ಲಿನ ಎಲ್ಲಾ ಹೂಡಿಕೆಗಳ ವಿಷಯದಲ್ಲಿ, ವಿವಿಧ ಮಾರುಕಟ್ಟೆ ಪರಿಸ್ಥಿತಿಗಳಡಿಯಲ್ಲಿ ಸಂಯೋಜಿತ ವಹಿವಾಟುಗಳ ಅಪಾಯಗಳು ಮತ್ತು ಸಂಭಾವ್ಯ ಪ್ರಯೋಜನಗಳಿಗೆ ಸಂಬಂಧಿಸಿದಂತೆ ಅನುಭವವಿರುವ ಮತ್ತು ಚೆನ್ನಾಗಿ ತಿಳಿದುಕೊಂಡಿರುವ ವ್ಯಕ್ತಿಯನ್ನು ಸಂಪರ್ಕಿಸುವುದು ಉತ್ತಮ.